

# ಮಕ್ಕಳ ಬಾಯಲ್ಲಿ ಬೈಗುಳ!

**ಇದೇನ್ರೀ ಇದು.. ಇಷ್ಟು ಚಿಕ್ಕ ವಯಸ್ಸಿನಲ್ಲಿ ಹಿಂಗಾ ಮಾತನಾಡೋದು? ಹೇಗಪ್ಪಾ ಮಕ್ಕಳ ಈ ಕೆಟ್ಟ ಅಭ್ಯಾಸವನ್ನು ತಡೆಯುವುದು?– ಇದು ಬಹಳಷ್ಟು ಜನರು ಕೇಳುವ ಪ್ರಶ್ನೆ.**

**■ ಡಾ. ಕೆ. ಎಸ್. ಚೈತ್ರಾ**

ಬಸ್ ಸ್ಟಾಪಿನಲ್ಲಿ ನಿಂತು ಅಮ್ಮ, ಶಾಲೆಯಿಂದ ಮುದ್ದಿನ ಮಗ ಬರುವುದನ್ನೇ ಕಾತುರದಿಂದ ಕಾಯುತ್ತಿದ್ದಳು. ಬಸ್ಸಿಂದ ಇಳಿದ ಹತ್ತರ ಪೋರನಿಗೆ ಆಯಾಸವಾಗಿತ್ತು, ಹಸಿವೆ ಬೇರೆ. ಎದುರಿನ ಬೇಕರಿಯಲ್ಲಿ ಕಂಡ ಕೇಕ್ ಕೊಡಿಸುವಂತೆ ಅಮ್ಮನನ್ನು ಕೇಳಿದ. ಅಮ್ಮ ಬೇಡ ಎಂದದ್ದಕ್ಕೆ ಮುಖವೆಲ್ಲಾ ಕೆಂಪಾಗಿ, ಕೆಟ್ಟ ಶಬ್ದ ಉಪಯೋಗಿಸಿ ಬೈದ. ಅಮ್ಮನಿಗೆ ದಿಗ್ಭ್ರಮೆ! ಎಲ್ಲರೆದುರು ಅಪಮಾನ ಬೇರೆ. ಹಿಂದೆ ಮುಂದೆ ಯೋಚಿಸದೆ ತಾನೂ ಕೆಟ್ಟದಾಗಿ ವಾಪಸ್ ಬೈದು ಮಗನ ಬೆನ್ನಿಗೊಂದು ಗುದ್ದಿದಳು.

ಮನೆಯಲ್ಲಿ ನೆಂಟರಿಷ್ಟರು ಬಂದು ಜೋರು ಮಾತುಕತೆ ನಡೆದಿತ್ತು. ಮೂರು ವರ್ಷದ ಮುದ್ದು ಮಗು ತನ್ನಷ್ಟಕ್ಕೆ ಒಂದು ಕಡೆ ಕುಳಿತು ಆಡುತ್ತಿತ್ತು. ಯಾರೋ ಏನೋ ಕೇಳಿದ್ದೇ ತಡ, ಅಶ್ಲೀಲ ಶಬ್ದ ಉಲಿಯಿತು. ಸುತ್ತಲಿದ್ದವರೆಲ್ಲಾ ಗೊಳ್ಳನೆ ನಕ್ಕರು. ತಂದೆ– ತಾಯಿಯೂ ಈ ನಗುವಿನಲ್ಲಿ ಭಾಗಿಯಾಗಿದ್ದರು! ಎಲ್ಲರ ಗಮನ ತನ್ನತ್ತಲೇ ಇದೆ ಎಂದು ಖುಷಿಯಾಗಿ ಮಗು